ಉತ್ತರ

1) ಸಮಾಜ ಕಲ್ಯಾಣ ಸಮಿತಿ ಅಸ್ತಿತ್ವದಲ್ಲಿ ಇಲ್ಲ.

2) ಉದ್ಭವಿಸುವುದಿಲ್ಲ.

ಸಮಾಜ ಕಲ್ಯಾಣ ಇಲಾಖೆ ವಸತಿ ನಿಲಯಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 380(643)

ಸದಸ್ಯರ ಹೆಸರು : ಶ್ರೀ ಗುರುಸ್ವಾಮಿ ಎ.ಎಸ್.(ಚಾಮುಂಡೇಶ್ವರಿ)

ಸಚಿವರ ಹೆಸರು ಮತ್ತು ಪದನಾಮ : ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು)

ಪ್ರಶ್ನೆ

ಅ) ಮೈಸೂರು ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯಗಳು ಎಷ್ಟು ಅವು ಯಾವುವು?

ಆ) ಇದರಲ್ಲಿ ಎಷ್ಟಕ್ಕೆ ಸ್ವಂತ ಕಟ್ಟಡ ಇದೆ; ಇಲ್ಲದಿದ್ದಲ್ಲಿ ಸ್ವಂತ ಕಟ್ಟಡ ನಿರ್ಮಿಸಲು ಏನು ಕ್ರಮ ಕೈಗೊಳ್ಳಲಾಗಿದೆ?

ಇ) ತಾಲ್ಲೂಕಿನ ಬೇಡಿಕೆಗೆ ಅನುಸಾರ ವಸತಿ ನಿಲಯ ತೆರೆಯಲು ಸರ್ಕಾರ ಕ್ರಮ ಕೈಗೊಳ್ಳುವುದೇ? ಹಾಗಿದ್ದಲ್ಲಿ ಯಾವಾಗ ತೆರೆಯಲಾಗುವುದು?

ಉತ್ತರ

ಅ) ಸಮಾಜ ಕಲ್ಯಾಣ ನಿರ್ದೇಶನಾಲಯದ ವತಿಯಿಂದ ಮೈಸೂರು ತಾಲ್ಲೂಕಿನಲ್ಲಿ 12 ಮೆಟ್ರಿಕ್ ಪೂರ್ವ : ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ನಡೆಸಲಾಗುತ್ತಿವೆ. ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿವೆ.

ಆ) 12 ಸರ್ಕಾರಿ ವಿದ್ಯಾರ್ಥಿನಿಲಯಗಳ ಪೈಕಿ 5 ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡಗಳಲ್ಲಿರುತ್ತವೆ. ಉಳಿದಿರುವ ಏಳು ವಿದ್ಯಾರ್ಥಿನಿಲಯಗಳ ಪೈಕಿ 5 ವಿದ್ಯಾರ್ಥಿನಿಲಯಗಳು ನಿರ್ಮಾಣದ ಹಂತದಲ್ಲಿರುತ್ತವೆ. ಒಂದು ವಿದ್ಯಾರ್ಥಿನಿಲಯಕ್ಕೆ ನಿವೇಶನವಿದ್ದು ಕಟ್ಟಡ ನಕ್ಷೆ ಮತ್ತು ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಉಳಿದಿರುವ ಮೈಸೂರಿನಲ್ಲಿನ ಒಂದು ಬಾಲಕಿಯರ ಮೆಟ್ರಿಕ್ ನಂತರದ

ವಿದ್ಯಾರ್ಥಿನಿಲಯವು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ.

ಇ) ಹೌದು. 2001-2002ರಲ್ಲಿ ಮೈಸೂರು ತಾಲ್ಲೂಕಿನಲ್ಲಿ ಒಂದು ಬಾಲಕರ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ ಮತ್ತು ಒಂದು ವೃತ್ತಿಪರ ಬಾಲಕಿಯರ ಕಾಲೇಜು ವಿದ್ಯಾರ್ಥಿನಿಲಯಗಳನ್ನು ತೆರೆಯಲು ಸರ್ಕಾರದ ಅನುಮೋದನೆ ನೀಡಲಾಗಿದೆ.

ಈ ಮಂಜೂರಾದ ವಿದ್ಯಾರ್ಥಿನಿಲಯಗಳು ವ್ಯವಸ್ಥಿತವಾಗಿ ಪ್ರಾರಂಭಿಸಲು ಎಲ್ಲಾ ಮೂಲಭೂತ ಸೌಕರ್ಯವಿರುವ ಸೂಕ್ತ ಬಾಡಿಗೆ ಕಟ್ಟಡವನ್ನು ಪಡೆಯಲು ಕ್ರಮ ಜರುಗಿಸಲಾಗುತ್ತಿದೆ. ಸೂಕ್ತ ಕಟ್ಟಡಗಳು ದೊರೆತ ಕೂಡಲೇ ಈ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲಾಗುವುದು.

ಅನುಬಂಧ

ಮೈಸೂರು ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯಗಳ ವಿವರ.

ಕ್ರ. ಸಂ.	ವಿದ್ಯಾರ್ಥಿನಿಲಯದ ವಿವರ	ಮಂಜೂರಾತಿ ಸಂ.
	1) ಸರ್ಕಾರಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ	ಕಟ್ಟಡದ ವಿವರ.
1.	ಸರ್ಕಾರಿ ಬಾಲಕರ ವಿದ್ಯಾರ್ಥಿನಿಲಯ, ಜಯಪುರ, ಮೈಸೂರು ತಾ:	50 50 ಸ್ವಂತಕಟ್ಟಡ
2.	ಸರ್ಕಾರಿ ಬಾಲಕರ ವಿದ್ಯಾರ್ಥಿನಿಲಯ, ಕಡಕೋಳ, ಮೈಸೂರು ತಾ:	50 ಜಿಲ್ಲಾ ವಲಯದಲ್ಲಿ ಕಾಮಗಾರಿ ಕೈಗೊಂಡು ನಿರ್ಮಾಣ ಹಂತದಲ್ಲಿದೆ.
3.	ಸರ್ಕಾರಿ ಬಾಲಕರ ವಿದ್ಯಾರ್ಥಿನಿಲಯ ಕೀಳನಾಪುರ, ಮೈಸೂರು ತಾ.	50 ಸ್ವಂತ ಕಟ್ಟಡ
4.	ಎ.ಕೆ.ಬಿ.ಹೋಂ ಮೈಸೂರು	270 ಸ್ವಂತ ಕಟ್ಟಡ
5.	ಸರ್ಕಾರಿ ಬಾಲಕಿಯರ ವಿದ್ಯಾರ್ಥಿನಿಲಯ, ಮೈಸೂರು	50 ಸ್ವಂತ ಕಟ್ಟಡ
6.	ಎ.ಕೆ.ಬಿ.ಹೋಂ ಮೈಸೂರು	150 ಸ್ವಂತ ಕಟ್ಟಡ
	ಒಟ್ಟು	620
	2) ಸರ್ಕಾರಿ ಕಾಲೇಜು ವಿದ್ಯಾರ್ಥಿನಿಲಯ	
1.	ಸರ್ಕಾರಿ ಬಾಲಕಿಯರ ಕಾಲೇಜು ವಿದ್ಯಾರ್ಥಿನಿಲಯ, ಮೈಸೂರು	50 ಬಾಡಿಗೆ ಕಟ್ಟಡ ನಿರ್ಮಾಣದ ಹಂತದಲ್ಲಿದೆ.

2.	ಸರ್ಕಾರಿ ಬಾಲಕಿಯರ ಕಾಲೇಜು ವಿದ್ಯಾರ್ಥಿನಿಲಯ, ಮೈಸೂರು	75 ಬಾಡಿಗೆ ಕಟ್ಟಡದಲ್ಲಿದೆ ನಿವೇಶನ ಲಭ್ಯವಿಲ್ಲ.
3.	ಸರ್ಕಾರಿ ಬಾಲಕರ ಕಾಲೇಜು ವಿದ್ಯಾರ್ಥಿನಿಲಯ ಮೈಸೂರು	50 ಬಾಡಿಗೆ ಕಟ್ಟಡ ನಿವೇಶನ ಲಭ್ಯವಿದೆ.
4.	ವರ್ಗೀಕೃತ ಬಾಲಕರ ಕಾಲೇಜು ವಿದ್ಯಾರ್ಥಿನಿಲಯ ಮೈಸೂರು	50 ಬಾಡಿಗೆ ಕಟ್ಟಡ ನಿರ್ಮಾಣ ಹಂತದಲ್ಲಿದೆ.
5.	ಸರ್ಕಾರಿ ಬಾಲಕರ ಕಾಲೇಜು ವಿದ್ಯಾರ್ಥಿನಿಲಯ ಮೈಸೂರು	100 ಬಾಡಿಗೆ ಕಟ್ಟಡ ನಿರ್ಮಾಣ ಹಂತದಲ್ಲಿದೆ.
6.	ವರ್ಗೀಕೃತ ಬಾಲಕರ ಕಾಲೇಜು ವಿದ್ಯಾರ್ಥಿನಿಲಯ ಮೈಸೂರು	50 ಬಾಡಿಗೆ ಕಟ್ಟಡ ನಿರ್ಮಾಣ ಹಂತದಲ್ಲಿದೆ.
	ಒಟ್ಟು	375